**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಖಾನಾಪೂರ.**

**ಸಿ.ಸಿ ನಂ:** 1378/2018

ಪಿ.ಡಬ್ಲ್ಯೂ - 8

ಸಿ.ಡಬ್ಲ್ಯೂ - 5

ಹೆಸರು : ಅರುಣ ಬಾಳು ಗಾವಡೆ

ವಯಸ್ಸು : 65 ವರ್ಷ

ಉದ್ಯೋಗ : ಗೌಂಡಿ ಕೆಲಸ,

ವಾಸ : ಕೆಂಚಾಪೂರ ಗಲ್ಲಿ, ತಾಃ ಖಾನಾಪೂರ

ದಿನಾಂಕ 26-11-2025 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

ಚಾಸಾ 04 ನನಗೆ ಪರಿಚಯ ಇರುವುದಿಲ್ಲ.

ಸಾಕ್ಷಿದಾರರಿಗೆ ಈಗ ಜಪ್ತ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರನ್ನು ಈಗಾಗಲೇ ನಿ.ಪಿ.6 ಎಂದು ಗುರುತಿಸಲಾಗಿದೆ. ಸಾಕ್ಷಿದಾರರ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. 2018 ರಲ್ಲಿ ಪೊಲೀಸ ಠಾಣೆಯಲ್ಲಿ ನಾನು ಈ ಸಹಿ ಮಾಡಿರುತ್ತೇನೆ. ಪೊಲೀಸರು ಏನು ಮಾಡಿದರು ನನಗೆ ಗೊತ್ತಿಲ್ಲ, ಆದರೆ ಸಹಿ ಮಾತ್ರ ಮಾಡಿಸಿಕೊಂಡರು. ನಮ್ಮ ಸಮಕ್ಷಮ ಯಾವುದೇ ಮುದ್ದೆ ಮಾಲುಗಳನ್ನು ಅಮಾನತ್ ಪಡಿಸಿಕೊಂಡಿರುವುದಿಲ್ಲ. ಸಾಕ್ಷಿದಾರರು ಈಗ ಎರಡು ಫೊಟೋಗಳನ್ನು ನೋಡಿ ಗುರುತಿಸಿದ್ದು ಇರುತ್ತದೆ. ಸದರಿ ಫೊಟೋಗಳನ್ನು ಈಗಾಗಲೇ ನಿಪಿ7 ಮತ್ತು 8 ಎಂದು ಗುರುತಿಸಲಾಯಿತು. ನಿಪಿ-7 ರಲ್ಲಿ ಬಲದಿಂದ ಮೂರನೆಯದವನು ನಾನೇ ಎಂದು ನುಡಿದಿರುತ್ತಾರೆ. ಪೊಲೀಸರು

ಫೋಟೋಕ್ಕೆ ನಿಲ್ಲು ಎಂದಾಗ ನಿಂತೇನು. ಏಕೆ ಫೋಟೋ ತೆಗೆದರೆಂದು ನನಗೆ ಗೊತ್ತಿಲ್ಲ. ಸಾಕ್ಷಿದಾರರು ಆರೋಪಿತರನ್ನು ವಿಸಿಯಲ್ಲಿ ನೋಡಿ ಆ ದಿನ ನಿಪಿ-7 ಮತ್ತು 8 ಫೋಟೋ ತೆಗೆಯ ಬೇಕಾದರೆ ಆರೋಪಿತರು ಕೂಡ ಪೊಲೀಸರ ಜೊತೆ ಇದ್ದರು.

(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

ಪಾಟೀ ಸವಾಲುಃ ಸಸಅ ರವರಿಂದ

ದಿಃ 23.12.2017 ರಂದು ಚಾಸಾ 19 ರವರು ಪಂಚನಾಮೆಗೆ ನನ್ನನ್ನು ಕರೆದರು ಎಂದು ಸೂಚಿಸಿದರೆ, ಪಂಚನಾಮೆ ಬಗ್ಗೆ ನನಗೆ ಮಾಹಿತಿ ನೀಡಿಲ್ಲ ಎನ್ನುತ್ತಾರೆ. ನನ್ನ ಹಾಗೂ ಚಾಸಾ 4 ರವರ ಸಮಕ್ಷಮ ಆರೋಪಿತರಿಂದ ಹೊಂಡಾ ಕಂಪನಿಯ ಆ್ಯಕ್ಟೀವಾ ಮೋಟರ ಸೈಕಲ ನಂ.ಕೆಎ-28/ಯು-9653 ನ್ನು ಹಾಗೂ ಕಬ್ಬಿಣ ರಾಡಗಳನ್ನು, ಕೆಂಪು ಬಣ್ಣದ ಪಕ್ಕಡನ್ನು, ಹಸಿರು ಬಣ್ಣದ ಸ್ಕ್ರೂ ಡ್ರೈವರನ್ನು ಜಪ್ತು ಪಡಿಸಿಕೊಂಡಿದ್ದರು ಎಂದು ಸೂಚಿಸಿದರೆ ಸರಿಯಲ್ಲ . ಸಂಜೆ 04.50 ರಿಂದ 05.55 ಗಂಟೆವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ . ನನ್ನ ಸಮಕ್ಷಮ ಜಪ್ತ ಪಡಿಸಿ ಫೋಟೋ ತೆಗೆದುಕೊಂಡಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ .

ನನ್ನನ್ನು ಹಾಗೂ ಚಾಸಾ 4 ರವರನ್ನು ಕೌಂದಲ ಗ್ರಾಮದ ನಂದಗಡ ಖಾನಾಪೂರ ಮೇನ ರೋಡ ಹತ್ತಿರ ಬ್ರೀಜ್ ಮೇಲೆ ಕರೆಸಿದಂತೆ ಬಂದೆವೆಂದರೆ ಸರಿಯಲ್ಲ, ನನಗೆ ಹಾಗೂ ಚಾಸಾ 4 ರವರಿಗೆ ಪಂಚನಾಮೆಯ ವಿಷಯವನ್ನು

ತಿಳಿಸಿದರೆಂದರೆ ಸರಿಯಲ್ಲ, ಅದಕ್ಕೆ ನಾವು ಒಪ್ಪಿ ಕೊಂಡೆವೆಂದರೆ ಸರಿಯಲ್ಲ,ಸದರಿಯ ಬಗ್ಗೆ ಪೊಲೀಸರು ನಮ್ಮ ಮುಂದೆ ಪಂಚನಾಮೆ ಮಾಡಿಕೊಂಡರೆಂದರೆ ಸರಿಯಲ್ಲ, ಸದರಿ ಪಂಚನಾಮೆಯನ್ನು ಸಂಜೆ 06.00 ರಿಂದ 06.45 ರವರೆಗೆ ಮಾಡಲಾಯಿತು ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.